**ಗೌರವಾನ್ವಿತ 3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಮುಎಫಸಿ ನ್ಯಾಯಾಲಯ ಬೆಳಗಾವಿ**

**ಓ.ಎಸ್ ನಂಃ947ಃ2013**

**ಪಿ. ಡಬ್ಲೂ-1**

ದಿಃ 21-06-2017 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ.ಎಂ.ಆರ್.ಎಂ 3ನೇ ಪ್ರತಿವಾದಿ ಪರ ವಕೀಲರಿಂದ ಃ-

ನಮ್ಮ ತಂದೆಗೆ ನಾನು 1ನೇ ವಾದಿ ಮತ್ತು 3 ಮತ್ತು 4 ನೇ ಪ್ರತಿವಾದಿಗಳು ಮಕ್ಕಳಾಗಿದ್ದವು. 1ನೇ ವಾದಿಗೆ 20 ವರ್ಷದ ಹಿಂದೆ ಮದುವೆಯಾಗಿತ್ತು. ಸದರಿಯವರಿಗೆ ಬೈಲಹೊಂಗಲ ತಾಲೂಕಿನಲ್ಲಿ ಮದುವೆ ಮಾಡಿಕೊಟ್ಟಿರುತ್ತೇವೆ. ಸದರಿಯವರ ಗಂಡ ಸಿಲಿಂಡರ ಕಂಪನಿಯಲ್ಲಿ ಕೆಲಸ ಮಾಡುತ್ತಾನೆ. 1ನೇ ವಾದಿಗೆ ನನ್ನ ತಂದೆ ಸ್ವತಹ ಖರ್ಚಿನಿಂದ ಮದುವೆ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿ. ಮದುವೆ ಸಮಯದಲ್ಲಿ ಸದರಿಯವರಿಗೆ ಒಂದೂವರೆ ತೊಲೆ ಬಂಗಾರ ನೀಡಿದ್ದರು ಅಂದರೆ ಸರಿಯಲ್ಲ. ಆಗ 5000 ರೂ. ವರದಕ್ಷಿಣೆ ನೀಡಿದ್ದರು ಅಂದರೆ ಸರಿಯಲ್ಲ. ಸದರಿಯವರಿಗೆ ನನ್ನ ತಂದೆಯವರು ಗೃಹ ಉಪಯೋಗಿ ಸಾಮಾನುಗಳನ್ನು ಖರೀದಿಸಲು ರೂ.5000-00 ಕೊಟ್ಟಿದ್ದರು ಅಂದರೆ ಸರಿಯಲ್ಲ. ಸದರಿ ಪುಷ್ಪ ಅವರ ಗಂಡ ಶಾಹುನಗರದಲ್ಲಿ ಮನೆಯನ್ನು ಕಟ್ಟಿರುತ್ತಾರೆ ಅಂದರೆ ಸರಿಯಲ್ಲ. ಸದರಿ ಮನೆ ಕಟ್ಟುವಾಗ ನನ್ನ ತಂದೆಯವರು ಹಣದ ಸಹಾಯ ಮಾಡಿರುತ್ತಾರೆ ಅಂದರೆ

ಸರಿ.

2. ನಾನು 9ನೇ ತರಗತಿಯವರೆಗೂ ಓದಿದ್ದೇನೆ. ನಾನು ಬೈಲಹೊಂಗಲದಲ್ಲಿ ವಾಸವಾಗಿದ್ದೇನೆ. ನನಗೆ ಮದುವೆ 16 ವರ್ಷವಾಗಿರುತ್ತದೆ. ನನ್ನ ಮದುವೆ ಸಮಯಲ್ಲಿ ನನ್ನ ತಂದೆ ನನ್ನ ಅಕ್ಕ ಪುಷ್ಪನಿಗೆ ಮೇಲೆ ಹೇಳಿದ ರೀತಿಯಲ್ಕ್ಲಿ ಹಣ ನೀಡಿ ಮದುವೆ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಮದುವೆ ನಂತರ ನಾವು ಮನೆ ಕಟ್ಟಿರುತ್ತೇವೆ ಅಂದರೆ ಸಾಕ್ಷಿಯು ಮದುವೆಗೆ ಮುಂಚೆಯೇ ಮನೆಯನ್ನು ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮನೆ ಕಟ್ಟುವಾಗ 3ನೇ ಮತ್ತು 4ನೇ ಪ್ರತಿವಾದಿ ಸಹಾಯ ಮಾಡಿರುತ್ತಾರೆ ಅಂದರೆ ಸಾಕ್ಷಿಯು ಕೈ ಸಹಾಯ ಮಾಡಿರುತಾರೆ ಆದರೆ ಹಣ ಸಹಾಯ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮನೆ ಕಟ್ಟುವಾಗ ನನ್ನ ತಂದೆ ರೂ.25000 ಸಹಾಯ ಮಾಡಿದ್ದರು ಅಂದರೆ ಸರಿಯಲ್ಲ. 4ನೇ ಪ್ರತಿವಾದಿಯವರು ನನ್ನ ತಂದೆ ತಾಯಿ ಜೊತೆ ವಾಸವಾಗಿದ್ದಾರೆ ಎಂದರೆ ಸರಿ. 4ನೇ ಪ್ರತಿವಾದಿ ಮತ್ತು ನನ್ನ ತಂದೆ ತಾಯಿ ನನ್ನ ಜೊತೆ ವಾಸವಾಗಿದ್ದಾರೆ ಅಂದರೆ ಸರಿಯಲ್ಲ. 4ನೇ ಪ್ರತಿವಾದಿಯವರ ಮದುವೆಯಾಗಿ 25 ವರ್ಷ ಆಗಿರುತ್ತದೆ ಅಂದರೆ ಸರಿ. ಮದುವೆ ನಂತರ ಸದರಿಯವರು ತಂದೆ ತಾಯಿಯವರ ಜೊತೆ ಇದ್ದರು ಅಂದರೆ ಸರಿ. 3ನೇ ಪ್ರತಿವಾದಿ ಹೆಂಡತಿ ಜೊತೆ ನನ್ನ ತಾಯಿ ಮತ್ತು ನಾನು ಜಗಳಮಾಡಿ 3ನೇ ಪ್ರತಿವಾದಿಯನ್ನು ಹೊರಗೆ ಹಾಕಿರುತ್ತೇನೆ ಅಂದರೆ ಸರಿಯಲ್ಲ. 3ನೇ ಪ್ರತಿವಾದಿ ನಮ್ಮ ಜೊತೆ ಚೆನ್ನಾಗಿದ್ದರು ಅಂದರೆ ಸರಿಯಲ್ಲ. 3ನೇ ಪ್ರತಿವಾದಿಗೆ ನಮ್ಮ ಜಮೀನಿನಲ್ಲಿ ಪಾಲು

ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಇನ್ನೂ ಪಾಲು ಆಗಿಲ್ಲ ಎಂದು ಉತ್ತರಿಸಿರುತ್ತಾರೆ. ಸುರೇಶ 3ನೇ ಪ್ರತಿವಾದಿ ಇವರ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಆ ಬಗ್ಗೆ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿ ಹೆಸರಿನಲ್ಲಿ ಜಮೀನು ಇಲ್ಲದ ಕಾರಣ ಸದರಿಯವರು ಜಮೀನು ಮಾರಾಟ ಮಾಡುವ ಪ್ರಮೇಯ ಇಲ್ಲ ಎಂದರೆ ಸಾಕ್ಷಿಯು ಸದರಿ ಮಾರಾಟ ಮಾಡಲು ಪ್ರಯತ್ನಿಸಿದ್ದರು ಎಂದು ಉತ್ತರಿಸುತ್ತಾರೆ.

3. ನನ್ನ ಮುಖ್ಯ ವಿಚಾರಣೆ ಬಾಪ್ತು ಪತ್ರ ಇಂಗ್ಲೀಷನಲ್ಲಿ ಇದ್ದ ಕಾರಣ ನಿಮಗೆ ಓದಲು ಬರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ವಕೀಲರು ಓದಿ ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ. ಮುಖ್ಯ ವಿಚಾರಣೆ ಬಾಪ್ತು ಪ್ರಮಾಣ ಪತ್ರದಲ್ಲಿ ನಮೂದಿಸಿದ ವಿಚಾರಣೆ ನನಗೆ ಗೊತ್ತಿಲ್ಲ ಅಂದರೆ ಸರಿಯಲ್ಲ ವಕೀಲರು ಹೇಳಿದ ಮೇರೆಗೆ ಸಹಿಯನ್ನು ಮಾಡಿರುತ್ತೇನೆ ಅಂದರೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಿಲಾಯಿತು.

(ಸಾಕ್ಷಿಯ ಹೇಳಿ ಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖ ನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಮ್ಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.